ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 07.10.2023.

**ಮುಖ್ಯ ವಿಚಾರಣೆ:** ಎದುರುದಾರ ಪರ ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ಅರ್ಜಿಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಎದುರುದಾರರ ನನಗೆ ಬರೆದುಕೊಟ್ಟ ಮುಕ್ತಿಯಾರ ಪತ್ರ ನಿಆರ್-1 ಎಂದು, ಒಎಸ್.ನಂ.65/2022 ರಲ್ಲಿಯ ಸಂಪೂರ್ಣ ಆದೇಶದ ಪ್ರತಿಯನ್ನು ನಿಆರ್-2 ಎಂದು, ಸದರಿ ಕೇಸಿನಲ್ಲಿಯ ವಾದಪತ್ರದ ಪ್ರತಿಯನ್ನು ನಿಆರ್-3 ಎಂದು, ರಾಜಿ ಅರ್ಜಿ ಪ್ರತಿಯನ್ನು ನಿಆರ್-4 ಎಂದು, ಒಎಸ್.ನಂ.77/2021 ಸಂಪೂರ್ಣ ಆದೇಶದ ಪ್ರತಿಯನ್ನು ನಿಆರ್-5 ಎಂದು, ಒಎಸ್.ನಂ.65/2022 ರಲ್ಲಿ ಆದ ರಾಜಿ ಡಿಕ್ರಿ ನಿಆರ್-6 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಿಂದಃ</u>**

ನಾನು ವಕೀಲ ಅಂತ ಕಲಬುರಗಿಯಲ್ಲಿ ವಕೀಲ ವೃತ್ತಿ ಮಾಡುತ್ತಿದ್ದೇನೆ. ನಿಆರ್-1 ನ್ನು ಕೊಟ್ಟವರು ನನ್ನ ಹೆಂಡತಿ ಇರುತ್ತಾಳೆ ಎಂದರೆ ಸರಿ. ನನ್ನ ಹೆಂಡತಿ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಬೆನ್ನು ನೋವಿನ ತೊಂದರೆ ಇದ್ದು, ಪ್ರಯಾಣ ಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಸುಮಾರು 2 ವರ್ಷಗಳ ಮೇಲೆ ಆ ರೀತಿ ಅವರಿಗೆ ತೊಂದರೆ ಇರುತ್ತದೆ. ಬೆನ್ನು ನೋವಿಗೆ ಮೊದಲು ಸೋಲಾಪುರದಲ್ಲಿ ಆಸ್ಪತ್ರೆಯಲ್ಲಿ ತೋರಿಸಿದ್ದೆ. ತದ ನಂತರ ಆರ್ಯುರ್ವೆದಿಕ್ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಸೋಲಾಪುರದಲ್ಲಿ ಕುಲಕರ್ಣಿ ಆಸ್ಪತ್ರೆಗೆ ತೋರಿಸಿದ್ದೆ. ಸೋಲಾಪುರ ಆಸ್ಪತ್ರೆಗೆ ತೋರಿಸಿದ್ದರ ಬಗ್ಗೆ ದಾಖಲೆ ಹಾಜರುಪಡಿಸಿಲ್ಲಾ ಎಂದರೆ ಸರಿ.

ಅರ್ಜಿದಾರರ ಜೊತೆ ಎದುರುದಾರಳ ಮಾಡಿಕೊಂಡ ಕರಾರು ಪತ್ರದ ಬಗ್ಗೆ ಮಾಹಿತಿ ಇದೆ. ಸದರಿ ಕರಾರು ಪತ್ರವನ್ನು ನನ್ನ ಸಮಕ್ಷಮ ಮಾಡಿಕೊಂಡಿದ್ದರು.ಸದರಿ ಕರಾರು ಪತ್ರಕ್ಕೆ ನನ್ನ ಸಹಿ ಇರುವುದಿಲ್ಲ. ನಿಆರ್-3 ಬಗ್ಗೆ ನಮಗೆ ನಾವು ಅಮಲಬಜಾವಣೆ ಪ್ರಕರಣದಲ್ಲಿ ಅರ್ಜಿದಾರಳು ತಕರಾರು ಸಲ್ಲಿಸಿದ ಸಮಯದಲ್ಲಿ ನಮಗೆ ಗೊತ್ತಾಗಿರುತ್ತದೆ. ಸುಮಾರು 7-8 ತಿಂಗಳ ಹಿಂದೆ ನನಗೆ ಗೊತ್ತಾಗಿರುತ್ತದೆ. ಸದರಿ ನಿಆರ್-6 ರ ಡಿಕ್ರಿಯನ್ನು ನಾನು ಎಲ್ಲಿಯು ಪ್ರಶ್ನೆ ಮಾಡಿಲ್ಲಾ. ಏಕೆಂದರೆ ಸದರಿ ಪ್ರಕರಣದಲ್ಲಿ ನಾವು ಪಕ್ಷಗಾರರು ಇಲ್ಲಾ. ಅರ್ಜಿದಾರಳಿಗೆ ಪ್ಯಾರೆಲೆಸಸ್ ಕಾಯಿಲೆ ಬಂದಿತ್ತು ಎಂದರೆ ಸರಿಯಲ್ಲ. ಹೀಗಾಗಿ ಮೂಲ ಪ್ರಕರಣದಲ್ಲಿ ಅವಳು ತನ್ನ ವಕೀಲರನ್ನು ಬೇಟಿಯಾಗಿಲ್ಲಾ ಎಂದರೆ ಸರಿಯಲ್ಲ. ಅರ್ಜಿದಾರಳು ನನ್ನ ಕಾಯಿಲೆ ಸಲುವಾಗಿ ತೆಲೆಕುಣಿ ಗ್ರಾಮದಲ್ಲಿ ಆರ್ಯುರ್ವೆದಿಕ್ ಔಷಧಿ

ಪಡೆದುಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ಹೀಗಾಗಿ ಮೂಲ ಪ್ರಕರಣದಲ್ಲಿ ಅವಳಿಗೆ ಬರಲು ಆಗಿಲ್ಲಾ ಎಂದರೆ ಸರಿಯಲ್ಲ.

ಅರ್ಜಿದಾರಳಿಗೆ ಎದುರುದಾರಳು ಒಂದು ಕರಾರು ಪತ್ರ ಬರೆದುಕೊಟ್ಟಿದ್ದು ನನಗೆ ಗೊತ್ತಿಲ್ಲಾ. ಸಾಕ್ಷಿಗೆ ದಿಃ 28.05.2017 ರಂದು ಎದುರುದಾರಳು ಅರ್ಜಿದಾರಳಿಗೆ ಬರೆದುಕೊಟ್ಟ ಕರಾರು ಪತ್ರದ ಝುರಾಕ್ಸ್ ಪ್ರತಿಯನ್ನು ಓದಲು ಕೊಟ್ಟಿದ್ದು, ಸಾಕ್ಷಿ ಅದನ್ನು ಸಂಪೂರ್ಣವಾಗಿ ಓದಿ ಅದರಲ್ಲಿ ಬರೆದಿರುವ ಸಂಗತಿಗಳು ನಿಜವಿರುತ್ತವೆ ಮತ್ತು ಅದರಲ್ಲಿ ಎದುರುದಾರಳ ಸಹಿ ಕೂಡಾ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಅದೇ ರೀತಿ ಸದರಿ ಕರಾರು ಪತ್ರ 2017 ರಿಂದ 2022 ರವರೆಗೆ ಜಮೀನು ಕಡತಿ ಹಾಕಿಕೊಂಡ ಬಗ್ಗೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರದ ಮೂಲ ಪ್ರತಿ ನಮ್ಮ ಮನೆಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲಾ.

ಮೇಲೆ ಹೇಳಿದ ಕರಾರು ಪತ್ರ ಮೂಲ ದಾವೆ 77/2021 ರ ದಾವೆಯ ಆಸ್ತಿಗೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿಃ 28.05.2017 ರಂದು ಆದ ಕರಾರು ಪತ್ರ ಯಾವ ಜಮೀನಿಗೆ ಸಂಬಂಧಪಟ್ಟಿದ್ದು, ಕೇಳಿದ ಪ್ರಶ್ನೆಗೆ ಸಾಕ್ಷಿ ಬೇರೆ ಸರ್ವೆ ನಂಬರದು ಇದೆ ಅದರ ಸರ್ವೆ ನಂಬರ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ದಿಃ 28.05.2017 ರಂದು ಆದ ಕರಾರು ಪತ್ರವನ್ನು ವಿಜಯಕುಮಾರು ಮಾಸೇಳಾ ಎಂಬುವವರು ಬರೆದಿರುತ್ತಾರೆ. ದಿಃ 28.05.2017 ರಂದು ಆದ ಕರಾರು ಪತ್ರ ದಿನ ನಾನು ಕೂಡಾ ಹಾಜರಿದ್ದೆ, ದಿಃ 28.05.2017 ರಂದು ಆದ ಕರಾರು ಪತ್ರ ಸುಮಾರು 22 ಎಕರೆಗೆ ಸಂಬಂಧಪಟ್ಟಿರುತ್ತದೆ.

ಒಎಸ್.ನಂ.77/2021 ರ ದಾವೆಯಲ್ಲಿ ಒಟ್ಟು 3 ಕರಾರು ಪತ್ರಗಳು ಇರುತ್ತವೆ. ಸದರಿ ಮೂರು ಕರಾರು ಪತ್ರಗಳು ದಾವಾ ಆಸ್ತಿಗೆ ಸಂಬಂಧಪಟ್ಟಿರುತ್ತವೆ, ಬೇರೆ ಆಸ್ತಿಗಳಿಗೆ ಸಂಬಂಧಪಟ್ಟಿಲ್ಲಾ. ಮೇಲೆ ಹೇಳಿದ 3 ಕರಾರು ಪತ್ರಗಳು ಆಗುವ ಕಾಲಕ್ಕೆ ನಾನು ಹಾಜರಿದ್ದೆ ಎಂದರೆ ಸರಿ. ಅರ್ಜಿದಾರಳು ಸಲ್ಲಿಸಿದ ಕಾಲ ವಿಳಂಭ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಎದುರುದಾರಳಿಗೆ ಯಾವುದೆ ಹಾನಿ ಲುಕ್ಸಾನ್ ಆಗುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರಳ ಪಡೆದುಕೊಂಡ ಕರಾರು ಪತ್ರಗಳು ಮೋಸ ಮಾಡಿ ಪಡೆದುಕೊಂಡ ಕರಾರು ಪತ್ರಗಳು ಇರುತ್ತವೆ ಎಂದರೆ ಸರಿಯಲ್ಲ. ಎದುರುದಾರಳು ಪಡೆದುಕೊಂಡ ಕರಾರ ಪತ್ರಗಳು ಅರ್ಜಿದಾರಳ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಅರ್ಜಿದಾರಳಿಗೆ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ. ಅವರದು ಕೂಡಾ ದಾವಾ ಆಸ್ತಿಗಳಲ್ಲಿ ಭಾಗ ಇದೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**